ಶ್ರೀ ಎ. ರಾಮದಾಸ್ :— ನಮ್ಮದೇ ಪ್ರಾಪರ್ಟಿಗೆ ರಿಜಿಸ್ಟ್ರೇಷನ್ ಆಗಿಲ್ಲ. ನಮ್ಮ ಭೂಮಿಯನ್ನು ನಮಗೆ ಇಲ್ಲವೆಂದು ಹೇಳುವ ರೀತಿಯಲ್ಲಾದರೆ, ನಮ್ಮ ಭೂಮಿಯನ್ನು ಬೇರೆ ಯಾರಿಗೋ ಕೊಟ್ಟು ಲೀಸ್ ಮಾಡಿಕೊಳ್ಳುವದಕ್ಕೋಸ್ಕರ ಹೊರಟಿದ್ದರೆಂದು ಹೇಳುವುದಾದರೆ, ಇದರ ಹಿಂದೆ ನಡೆದ ವಿಚಾರಗಳೇನೆಂಬುದನ್ನು ಸದನಕ್ಕೆ ತಿಳಿಸಬೇಕು. ಬೇರೆಯವರ ಜೊತೆ ಲೀಸ್ ಅಗ್ರಿಮೆಂಟ್ ಮಾಡಿಕೊಂಡು, ಅವರಿಗೆ ಹಮ ಕೊಟ್ಟಿದ್ದೇವೆನ್ನುವುದಾದರೆ, ಎಷ್ಟು ಹಣ ಕೊಟ್ಟಿದ್ದಾರೆ, ಏನಾಗಿದೆ ಎಂಬುದು ತಿಳಿಯಬೇಕಾಗಿದೆ. ನಮ್ಮ ಪ್ರಾಪರ್ಟಿಗೆ ಬೇರೆಯವರಿಗೆ ಏಕೆ ಹಣ ಕೊಟ್ಟಿದ್ದೀರಿ?

ಶ್ರೀ ಬಾಬುರಾವ್ ಬಿ. ಚಿಂಚನಸೂರ್ :— ಲೀಜ್ ಅಗ್ರಿಮೆಂಟ್ ಮಾಡಿದ್ದು ತಪ್ಪು. ಅದನ್ನೀಗ ನಾನು ರದ್ದುಪಡಿಸಿದ್ದೇನೆ. ಇದರ ಜೊತೆಗೆ ದುರಸ್ತಿ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದರ ಜೊತೆಗೆ 5 ಲಕ್ಷ ರೂಪಾಯಿಗಳನ್ನು ರಸ್ತೆ ಸಲುವಾಗಿ ನಾನು ಬಿಡುಗಡೆ ಮಾಡಿದ್ದೇನೆ. ಅಧಿವೇಶನ ಮುಗಿದ ನಂತರ ಪುನ: ಅಧಿಕಾರಗಳನ್ನು ತಿರುಪತಿಗೆ ಕಳುಹಿಸಿ ಅದನ್ನು ಸರಿಪಡಿಸುತ್ತೇನೆ. ಏಕೆಂದರೆ ಅದು ನಮ್ಮ ನೆಲವಾಗಿರುವುದರಿಂದ ನಾವೇ ಅದಕ್ಕೆ ಹಕ್ಕುದಾರರು.

ಶ್ರೀ ಎ.ಎನ್. ಗುರುಸ್ವಾಮಿ :— ದೇವರಿಗೆ ಈ ರೀತಿ ಕಷ್ಟವಾದರೆ ನಮ್ಮ ಗತಿ ಏನು?

ವಿದ್ಯುತ್ ಕಳವು ಹಾಗೂ ದುರುಪಯೋಗದ ಪ್ರಕರಣಗಳು.

588(5625) ಶ್ರೀ ಅಂಗಾರ್ ಎಸ್. (ಸೂಳ್ಯ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಜಾಗೃತದಳ ಕಳೆದ ಒಂದು ವರ್ಷದಲ್ಲಿ ಒಟ್ಟು ಎಷ್ಟು ವಿದ್ಯುತ್ ಕಳವು ಹಾಗೂ ವಿದ್ಯುತ್ ದುರುಪಯೋಗದ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಸಂಬಂಧ ದಂಡ ರೂಪದಲ್ಲಿ ವಸೂಲಿಯಾಗಿರುವ ಹಣದ ಮೊತ್ತ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಜಾಗೃತ ದಳವು ಎಷ್ಟು ಸಂಸ್ಥೆಗಳ ಮೇಲೆ ಧಾಳಿ ಮಾಡಿದೆ; ಈ ಸಂಬಂಧ ಇದರ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಜಾಗೃತ ದಳವು ಕಳೆದ ಒಂದು ವರ್ಷದಲ್ಲಿ ಅಂದರೆ 1999-2000 ಸಾಲಿನಲ್ಲಿ ಒಟ್ಟು 422 ವಿದ್ಯುತ್ ಕಳವು

ಪ್ರಕರಣಗಳನ್ನು ಹಾಗೂ 3337 ವಿದ್ಯುತ್ ದುರುಪಯೋಗದ ಪ್ರಕರಣಗಳನ್ನು ಪತ್ತೆ ಮಾಡಿದೆ. ಜಿಲ್ಲಾವಾರು ಮಾಹಿತಿಗಳನ್ನು ಅನುಬಂಧ (ಅ) ದಲ್ಲಿ ನೀಡಿದೆ.

ಈ) ಈ ಸಂಬಂಧ ವಿದ್ಯುತ್ ಕಳವು ಪ್ರಕರಣಗಳಿಂದ 40.68 ಲಕ್ಷ ರೂಪಾಯಿಗಳನ್ನು ಹಾಗೂ ವಿದ್ಯುತ್ ದುರುಪಯೋಗದ ಪ್ರಕರಣಗಳಿಂದ 187.26 ಲಕ್ಷ ರೂಪಾಯಿಗಳನ್ನು ದಂಡದ ರೂಪದಲ್ಲಿ ವಸೂಲು ಮಾಡಲಾಗಿರುತ್ತದೆ. ಜಿಲ್ಲಾವಾರು ಮಾಹಿತಿಗಳನ್ನು ಅನುಬಂಧ (ಆ) ದಲ್ಲಿ ನೀಡಿದೆ.

ಇ) ಜಾಗೃತ ದಳವು ಕಳೆದ ಒಂದು ವರ್ಷದಲ್ಲಿ ಅಂದರೆ 1999-2000ನೇ ಸಾಲಿನಲ್ಲಿ ಒಟ್ಟು 36,438 ವಿದ್ಯುತ್ ಸ್ಥಾವರಗಳ ಮೇಲೆ ಧಾಳಿ ನಡೆಸಿ 422 ವಿದ್ಯುತ್ ಕಳವು ಪ್ರಕರಣಗಳನ್ನು ಹಾಗೂ 3337 ವಿದ್ಯುತ್ ದುರುಪಯೋಗದ ಪ್ರಕರಣಗಳನ್ನು ಪತ್ತೆಹಚ್ಚಿದೆ. ಪತ್ತೆ ಹಚ್ಚಲ್ಪಟ್ಟ 422 ವಿದ್ಯುತ್ ಕಳವು ಪ್ರಕರಣಗಳಲ್ಲಿ, 397.84 ಲಕ್ಷ ರೂ.ಗಳಷ್ಟು ದಂಡವನ್ನು ವಿಧಿಸಿ, 40.68 ಲಕ್ಷ ರೂಪಾಯಿಗಳನ್ನು ವಸೂಲುಮಾಡಿದೆ. ಹಾಗೂ ಪತ್ತೆಹಚ್ಚಲ್ಪಟ್ಟ 3337 ವಿದ್ಯುತ್ ದುರುಪಯೋಗ ಪ್ರಕರಣಗಳಲ್ಲಿ 1371.18 ಲಕ್ಷ ರೂಪಾಯಿಗಳಷ್ಟು ದಂಡವನ್ನು ವಿಧಿಸಿ 187.28 ಲಕ್ಷರೂಪಾಯಿಗಳನ್ನು ವಸೂಲು ಮಾಡಲಾಗಿದೆ.

ವಿದ್ಯುತ್ ಕಳ್ಳತನಗೊಳ್ಳುವ ಎಲ್ಲಾ ಪ್ರಕರಣಗಳಲ್ಲಿ (ಅಪರಾಧಾರ್ಹ ಪ್ರಕರಣಗಳು) ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 1910, ಕಲಂ 39 ಮತ್ತು 44ರ ಪ್ರಕಾರ ಆಪಾದಿತರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲು ಮಾಡಲಾಗುತ್ತದೆ ಮತ್ತು ಆಪಾದಿತರನ್ನು ದಸ್ತಗಿರಿ ಮಾಡಲಾಗುವುದು. ಅಲ್ಲದೇ, ಕ.ವಿ.ಪ್ರ.ನಿ.ನಿ.ಯ ವಿದ್ಯುಚ್ಛಕ್ತಿ ಸರಬರಾಜು ನಿಯಮಾವಳಿ ಪ್ರಕಾರ ಕೂಡಲೇ ವಿದ್ಯುತ್ ಸಂಪರ್ಕವನ್ನು ತೆಗೆದು ಕಳ್ಳತನಗೊಂಡ ಪ್ರಮಾಣಕ್ಕೆ ದಂಡವನ್ನು ಲೆಕ್ಕಾಚಾರ ಮಾಡಿ ಈ ಪ್ರಮಾಣಕ್ಕೆ ದಂಡವನ್ನು ವಿಧಿಸಿ ದಂಡದ ವಸೂಲಿಗಾಗಿ ಕ್ರಮಗಳನ್ನು ಜರುಗಿಸಲಾಗುತ್ತದೆ.

ವಿದ್ಯುತ್ ದುರುಪಯೋಗ ಪ್ರಕರಣಗಳಲ್ಲಿ, (ಅಪರಾಧಾರ್ಹವಲ್ಲದ ಪ್ರಕರಣಗಳಲ್ಲಿ) ನಿಗಮದ ವಿದ್ಯುತ್ ಸರಬರಾಜು ನಿಯಮಗಳ ಪ್ರಕಾರ ದುರುಪಯೋಗಗೊಂಡ ವಿದ್ಯುತ್‌ನ ಪ್ರಮಾಣವನ್ನು ಲೆಕ್ಕಾಚಾರ ಮಾಡಿ ದಂಡವನ್ನು ವಿಧಿಸಿ, ದಂಡವನ್ನು ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು.

ಅನುಬಂಧ 'ಅ' 1999-2000ದ ಸಾಲಿನಲ್ಲಿ ಪತ್ತೆಹಚ್ಚಲ್ಪಟ್ಟ ವಿದ್ಯುತ್ ಕಳವು ಹಾಗೂ ವಿದ್ಯುತ್ ದುರುಪಯೋಗ ಪ್ರಕರಣಗಳಲ್ಲಿ ವಸೂಲಿಯಾದ ದಂಡದ ಮೊತ್ತದ ಜಿಲ್ಲಾವಾರು ಮೊತ್ತಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿದ್ಯುತ್ ಪ್ರಕರಣಗಳಲ್ಲಿ ವಸೂಲಾದ ದಂಡದ ಮೊತ್ತ	ವಿದ್ಯುತ್ ದುರುಪಯೋಗ ಪ್ರಕರಣಗಳಲ್ಲಿ ವಸೂಲಾದ ದಂಡದ ಮೊತ್ತ
1.	ಧಾರವಾಡ	2,07,488-00	32,68,565-00
2.	ಗದಗ	--	1,60,981.00
3.	ಹಾವೇರಿ	--	40,267-00
4.	ದಾವಣಗೆರೆ	2,80,047-00	2,100-00
5.	ಚಿತ್ರದುರ್ಗ	--	--
6.	ಬೆಳಗಾವಿ	1,32,725-00	32,70,142-00
7.	ಉತ್ತರ ಕನ್ನಡ	9,769-00	3,45,543-00
8.	ಬಿಜಾಪುರ	2,00,783-00	4,11,887-00
9.	ಬಾಗಲಕೋಟೆ	--	1,02,547-00
10.	ಗುಲ್ಬರ್ಗಾ	1,66,518-00	4,31,348-00
11.	ಬೀದರ್	26,676-00	18,582-00
12.	ಬಳ್ಳಾರಿ	1,43,252-00	4,50,840-00
13.	ರಾಯಚೂರು	1,42,381-00	3,36,309-00
14.	ಕೊಪ್ಪಳ	--	9,32,007-00
15.	ಬೆಂಗಳೂರು ನಗರ	21,35,114-00	31,83,520-00
16.	ಬೆಂಗಳೂರು ಗ್ರಾಮಾಂತರ	88,984-00	1,34,026-00
17.	ತುಮಕೂರು	2,07,009-00	1,78,288-00
18.	ಕೋಲಾರ	--	--
19.	ಮೈಸೂರು	42,633-00	38,74,969-00
20.	ಚಾಮರಾಜನಗರ	40,000-00	--
21.	ಮಂಡ್ಯ	80,000-00	25,222-00
22.	ಕೊಡಗು	--	--
23.	ಹಾಸನ	--	--
24.	ಶಿವಮೊಗ್ಗ	--	5,12,680-00
25.	ಚಿಕ್ಕಮಗಳೂರು	67,733-00	1,92,444-00
26.	ದಕ್ಷಿಣ ಕನ್ನಡ	1,47,286-00	7,14,749-00
27.	ಉಡುಪಿ	--	1,39,227-00
	ಒಟ್ಟು	40,68,409-00	1,87,26,353-00
		ಅಥವಾ 40.68	ಅಥವಾ 187.28 ಲಕ್ಷ

ಅನುಬಂಧ 'ಆ'

1999-2000ದ ಸಾಲಿನಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಜಾಗೃತದಳವು ಪತ್ತೆ ಮಾಡಿದ ವಿದ್ಯುತ್ ಕಳವು ಹಾಗೂ ವಿದ್ಯುತ್ ದುರುಪಯೋಗ ಪ್ರಕರಣಗಳ ಜಿಲ್ಲಾವಾರು ಮಾಹಿತಿಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿದ್ಯುತ್ ಕಳವು ಪ್ರಕರಣಗಳ ಸಂಖ್ಯೆ	ವಿದ್ಯುತ್ ದುರುಪಯೋಗ ಪ್ರಕರಣಗಳ ಸಂಖ್ಯೆ
1.	ಧಾರವಾಡ	36	248
2.	ಗದಗ	19	15
3.	ಹಾವೇರಿ	--	8
4.	ದಾವಣಗೆರೆ	1	13
5.	ಚಿತ್ರದುರ್ಗ	--	3
6.	ಬೆಳಗಾವಿ	25	268
7.	ಉತ್ತರ ಕನ್ನಡ	16	9
8.	ಬಿಜಾಪುರ	11	40
9.	ಬಾಗಲಕೋಟೆ	--	32
10.	ಗುಲ್ಬರ್ಗಾ	34	185
11.	ಬೀದರ್	18	36
12.	ಬಳ್ಳಾರಿ	19	208
13.	ರಾಯಚೂರು	16	96
14.	ಕೊಪ್ಪಳ	--	160
15.	ಬೆಂಗಳೂರು ನಗರ	128	1163
16.	ಬೆಂಗಳೂರು ಗ್ರಾಮಾಂತರ	31	130
17.	ತುಮಕೂರು	29	98
18.	ಕೋಲಾರ	3	9
19.	ಮೈಸೂರು	7	200
20.	ಚಾಮರಾಜನಗರ	1	2
21.	ಮಂಡ್ಯ	9	92
22.	ಕೊಡಗು	3	9
23.	ಹಾಸನ	1	7
24.	ಶಿವಮೊಗ್ಗ	-	81
25.	ಚಿಕ್ಕಮಗಳೂರು	4	18
26.	ದಕ್ಷಿಣ ಕನ್ನಡ	7	153
27.	ಉಡುಪಿ	--	33
	ಒಟ್ಟು	422	3,337

ಶ್ರೀ ಡಿ.ವಿ. ಸದಾನಂದಗೌಡ (ಶ್ರೀ ಅಂಗಾರ ಎಸ್. ರವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, ನನಗೆ ಕೆಲವು ವಿವರಣೆಗಳನ್ನು ಕೊಡಬೇಕಾಗುತ್ತದೆ. 'ವಿದ್ಯುತ್ ಕಳವು ಹಾಗೂ ವಿದ್ಯುತ್ ದುರುಪಯೋಗ' ಇದರ ವ್ಯಾಪ್ತಿಯಲ್ಲಿ ನೀವೇನು ಈಗ ಅಕ್ರಮ ಇರುವುದನ್ನು ಸಕ್ರಮ ಮಾಡುತ್ತೀರಿ ಅದು ಇದರ ವ್ಯಾಪ್ತಿಯಲ್ಲಿ ಬಂದಿದೆಯೇ? ಬಂದಿದ್ದರೆ ಎಷ್ಟು ಪ್ರಕರಣಗಳನ್ನು ದಾಖಲಿಸಿಕೊಂಡಿದ್ದೀರಿ? ಈ ರೀತಿಯಾಗಿ ದಾಖಲಿಸಿಕೊಂಡಿದ್ದರೆ ಎಷ್ಟು ಜನ ಮತ್ತು ಎಷ್ಟು ದಂಡ ವಸೂಲಿ ಮಾಡಿದ್ದೀರಿ?

ಶ್ರೀ ವೀರಕುಮಾರ್ ಪಾಟೀಲ್ :— ಜಾಗೃತ ದಳದವರು ರೈಡ್ ಮಾಡುವಂಥ ಸಂದರ್ಭದಲ್ಲಿ ಐ.ಪಿ. ಸೆಟ್‌ಗಳ ಬಗ್ಗೆ ಕೆಲವು ಅಕ್ರಮವಿರುವುದು ಕಂಡುಬಂದಿದೆ. ಸದ್ಯಕ್ಕೆ ನನ್ನ ಹತ್ತಿರ ವಿವರವಾದ ಅಂಕಿ ಅಂಶವಿರುವುದಿಲ್ಲ ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ತಮ್ಮ ಉತ್ತರದಲ್ಲಿ 422 ವಿದ್ಯುತ್ ಕಳವು ಹಾಗೂ 3337 ವಿದ್ಯುತ್ ದುರುಪಯೋಗದ ಪ್ರಕರಣಗಳನ್ನು ಪತ್ತೆ ಹಚ್ಚಿದೆ ಎಂದು ಉತ್ತರ ಕೊಟ್ಟಿರುತ್ತೀರಿ, ಆದರೆ ನನಗೆ ತಿಳಿದ ಪ್ರಕಾರ ಸುಮಾರು 12000ಕ್ಕಿಂತಲೂ ಹೆಚ್ಚಿಗೆ ಅಕ್ರಮ ಜೋಡಣೆಗಳನ್ನು ಈಗಾಗಲೇ ಮಾಡಿಕೊಂಡಿದ್ದಾರೆ. ಇವರು ಈ ವ್ಯಾಪ್ತಿಯಲ್ಲಿ ಬರುವುದಾದರೆ, ಬಹುಶ: ಇದರ ಸಂಖ್ಯೆ 12 ಸಾವಿರ 15 ಸಾವಿರಕ್ಕಿಂತ ಮೇಲೆ ಆಗುತ್ತಿತ್ತು. ಇವರನ್ನು ನೀವು ನಿಜವಾಗಿ ಸೇರಿಸಿಕೊಂಡಿದ್ದೀರಾ? ಒಂದು ಪಕ್ಷ ಸೇರಿಸಿಕೊಂಡಿದ್ದರೆ ಇವರಿಂದ ದಂಡ ವಸೂಲಿ ಮಾಡಿದ್ದೀರಾ? ಅಥವಾ ವಸೂಲು ಮಾಡುವಂಥ ಇರಾದೆ ತಮಗಿದೆಯೇ? ಈ ಎಲ್ಲವಕ್ಕೂ ಸ್ಪಷ್ಟ ಮಾಹಿತಿಯನ್ನು ನಾನು ತಮ್ಮಲ್ಲಿ ಕೇಳಬಯಸುತ್ತೇನೆ ತಾವು ಜಾಗೃತ ದಳದಿಂದ ಮಾತ್ರ ಪತ್ತೆ ಹಚ್ಚುವ ಕಾರ್ಯವಾಗಿದೆ ಎಂದು ಹೇಳಿದಿರಿ, ಇವರಿಂದ ಮಾತ್ರ ಆಗಿರುವುದಾದರೆ, ಅಧಿಕಾರಿಗಳಿಂದ ವಿದ್ಯುತ್ ಕಳವು ಅಥವಾ ದುರುಪಯೋಗವನ್ನು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲವೆ? ಅಧಿಕಾರಿಗಳು ಈ ನಿಟ್ಟಿನಲ್ಲಿ ಏನು ಕಾರ್ಯ ಪ್ರವೃತ್ತರಾಗಿದ್ದಾರೆ?

ಶ್ರೀ ವೀರಕುಮಾರ್ ಪಾಟೀಲ್ :— ನನ್ನ ಹತ್ತಿರ ಸರಿಯಾದ ಮಾಹಿತಿಯಿಲ್ಲ, ಪ್ರಕರಣಗಳವಾರು ಸರಿಯಾದ ಅಂಕಿಅಂಶವನ್ನು ಈ ವಾರದಲ್ಲಿ ತಮಗೆ ಕಳುಹಿಸಿ ಕೊಡುತ್ತೇನೆ. ಅಧಿಕಾರಿಗಳ ಬಗ್ಗೆ ತಾವು ಏನು ಕೇಳಿದಿರಿ ಅದು ನನಗೆ ತಿಳಿಯಲಿಲ್ಲ, ಆದ್ದರಿಂದ ಅದನ್ನು ಮತ್ತೊಮ್ಮೆ ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ :— ಯಾವುದೇ ಇಲಾಖೆಗಳಲ್ಲಿರುವ ಅಧಿಕಾರಿಗಳು, ಉದಾಹರಣೆಗೆ ಕೆ.ಯಿ.ಬಿ.ಯಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್, ಎಕ್ಸಿಕ್ಯೂಟೀವ್ ಇಂಜಿನಿಯರ್ಸ್, ಜ್ಯೂನಿಯರ್ ಮೀಟರ್ ರೀಡರ್ಸ್, ಇಂಥ ಅಧಿಕಾರಿಗಳಿಗೆ ವಿದ್ಯುತ್ ಕಳವು ಹಾಗೂ ವಿದ್ಯುತ್ ದುರುಪಯೋಗದ ಪ್ರಕರಣಗಳನ್ನು ಪತ್ತೆ ಹಚ್ಚುವುದಕ್ಕೆ ಆಗುವುದಿಲ್ಲವೆ?

ಇವರಿಗೆ ಯಾವ ಮಾಹಿತಿಯೂ ಬರುವುದಿಲ್ಲವೆ? ಕೇವಲ ಜಾಗೃತ ದಳದವರು ಮಾತ್ರ ಇವುಗಳನ್ನು ಪತ್ತೆ ಹಚ್ಚಿದ್ದಾರೆಯೇ ಎಂಬುದನ್ನು ತಾವು ಸ್ಪಷ್ಟ ಮಾಡಬೇಕು.

ಶ್ರೀ ವೀರಕುಮಾರ್ ಪಾಟೀಲ್:— ಆ ರೀತಿ ಏನೂ ಇಲ್ಲ, ಅವರು ಪತ್ತೆ ಹಚ್ಚಬಹುದು.

ಶ್ರೀ ಎಸ್. ಸುರೇಶ್ ಕುಮಾರ್:— ವಿದ್ಯುತ್ ಕಳವು ಪ್ರಕರಣಗಳನ್ನು ನಾವು ಕಂಡು ಹಿಡಿದಿದ್ದೇವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಿಗಮದ ಒಂದು ವರದಿಯ ಪ್ರಕಾರ ವಿದ್ಯುತ್ ಕಳವು ಮತ್ತು ಸೋರಿಕೆಯ ಪ್ರಮಾಣ ಶೇಕಡ 30 ಇದೆ ಎಂದು ಅವರು ಹೇಳುತ್ತಲೇ ಇರುತ್ತಾರೆ. ನನ್ನ ಪ್ರಶ್ನೆ ಏನೆಂದರೆ, ಇಷ್ಟೆಲ್ಲಾ ಭಾರಿ ಪ್ರಮಾಣದ ಪ್ರಕರಣಗಳು ನಿಮ್ಮ ನಿಗಮದ ಸಿಬ್ಬಂದಿಯ ನೆರವು ಇಲ್ಲದೇ ಆಗುವುದಿಲ್ಲ, ಹೀಗಿರುವಾಗ ನೀವು ಯಾವ ರೀತಿ ಇವರ ಮೇಲೆ ದಂಡ ಹಾಕುತ್ತಿದ್ದೀರಾ? ನೀವು ಯಾವ ರೀತಿಯಲ್ಲಿ ಇಂಥ ಪ್ರಕರಣಗಳನ್ನು ಪತ್ತೆ ಮಾಡಿ ದಂಡ ಹಾಕುತ್ತಿದ್ದೀರೋ ಅದೇ ರೀತಿಯಲ್ಲಿ ಇಂಥವುಗಳಿಗೆ ಸಹಾಯ ಮಾಡಿದ ಸಹಕಾರ ಕೊಟ್ಟು ಎಷ್ಟು ಜನ ಸಿಬ್ಬಂದಿಗಳ ಮೇಲೆ ನೀವು ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ವೀರಕುಮಾರ್ ಪಾಟೀಲ್:— ಕೆಲವು ಅಧಿಕಾರಿಗಳ ಮೇಲೆ ದೂರು ಬಂದಾಗ ಜಾಗೃತ ದಳದವರು ಕೆಲವು ಅಧಿಕಾರಿಗಳನ್ನು ಬುಕ್ ಮಾಡಿದ್ದಾರೆ ಹಾಗೂ ಕೆಲವು ತನಿಖೆ ಕೂಡ ನಡೆಯುತ್ತಿದೆ, ಕೆಲವು ಕೇಸ್ ಮುಗಿದು ಕೆಲವು ಅಧಿಕಾರಿಗಳು ಪುನ: ಸೇವೆಗೆ ಮರಳಿದ್ದಾರೆ.

ಶ್ರೀ ಎ. ರಾಮದಾಸ್:— ಜಾಗೃತ ದಳ ಏನು ಇದೆ ಇದಕ್ಕೆ ಸಂಬಂಧಪಟ್ಟು ಹಾಗೆ ಡಿ.ಜಿ.ಪಿ. ಹಾಗೂ ಎಸ್.ಪಿ. ಹಾಕಿದ್ದಾರೆ. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇವರಿಡರ ಚಾರ್ಜ್‌ನ್ನು ವಹಿಸಿಕೊಂಡಿದ್ದಾರೆ. ಅಲ್ಲಿ ಡಿ.ಜಿ.ಪಿ. ಇಲ್ಲ, ಎಸ್.ಪಿ.ಇಲ್ಲ, ಇವರ್ಯಾರು ಇಲ್ಲದೇ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇಷ್ಟನ್ನು ಮಾಡುವಂಥ ವ್ಯವಸ್ಥೆಗೆ ನಿಮ್ಮ ಸರ್ಕಾರ ಬಂದಿದೆ ಎಂದು ಹೇಳುವುದಾದರೆ ಇರುವ ವಿಚಾರ ಏನು? 10 ಪರ್‌ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ಹಾಗೂ ಒಟ್ಟು ನಲವತ್ತು ಪರ್‌ಸೆಂಟ್ ಲಾಸ್ ಎಂದು ತಾವು ಹೇಳಿದಿರಿ. ತಾವು ಕೊಟ್ಟಿರುವ ಮಾಹಿತಿ ಪ್ರಕಾರ ಕೋಟ್ಯಾಂತರ ರೂಪಾಯಿ ಲಾಸ್ ಆಗಿದ್ದರೂ ನಿವು ಕೇವಲ 187.26 ಲಕ್ಷ ರೂಪಾಯಿಗಳಷ್ಟು ದಂಡವನ್ನು ವಸೂಲು ಮಾಡಿದ್ದೀರಿ ಇದು ಏಕೆ? ಜಾಗೃತ ದಳದಲ್ಲಿರುವ ಅಧಿಕಾರಿಗಳು ಅಲ್ಲಿ ಇರಬಾರದು ಎಂದು ಇದೆಯೇ? ಏಕೆ ಅವರನ್ನು ಅಲ್ಲಿಂದ ಪದೇ ಪದೇ ವರ್ಗಾವಣೆ ಮಾಡುತ್ತೀರಿ? ಅಲ್ಲಿ ಡಿ.ಜಿ.ಪಿ. ಏಕೆ ಇಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ರಾಮದಾಸ್‌ರವರು ಪ್ರತಿ ಪ್ರಶ್ನೆಗೂ ಉಪ ಪ್ರಶ್ನೆ ಕೇಳಬೇಕು ಎನ್ನುವ ನಿಯಮ ಇದೆಯೇ?

ಶ್ರೀ ಎ. ರಾಮದಾಸ್ :— ಕೇಳಬಾರದು ಎನ್ನುವ ನಿಯಮ ಇದೆಯೇ? ಸರ್ಕಾರದ ಲೋಪ ಎತ್ತಬಾರದು ಎನ್ನುವುದಿದ್ದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಒಬ್ಬ ಸದಸ್ಯನಿಗೆ ಒಂದು ಪ್ರಶ್ನೆಗೆ ಒಂದು ಉಪ ಪ್ರಶ್ನೆ ಕೇಳಲಿಕ್ಕೆ ಮಾತ್ರ ಅವಕಾಶವಿದೆ.

ಅಧ್ಯಕ್ಷರು :— ಪ್ರಶ್ನೆ ಯಾರು ಹಾಕಿರುತ್ತಾರೋ ಅವರು ಎರಡು ಉಪ ಪ್ರಶ್ನೆ ಕೇಳಿದರೆ ಒಬ್ಬ ಸದಸ್ಯರು ಮಾತ್ರ ಒಂದು ಉಪ ಪ್ರಶ್ನೆ ಕೇಳಬಹುದು ಅಷ್ಟೆ. ಮೂರು ನಾಲ್ಕು ಉಪ ಪ್ರಶ್ನೆ ಕೇಳಬೇಡಿ ಎಂದು ನಾವು ಹೇಳುತ್ತಿರುವುದು.

ಶ್ರೀ ಎ. ರಾಮದಾಸ್ :— ಒಂದು ವರ್ಷದಿಂದ ಈ ಡಿಪಾರ್ಟ್‌ಮೆಂಟ್ ನಿಂದ ಡಿ.ಜಿ.ಪಿ. ಎಸ್.ಪಿ., ಯಾರನ್ನು ಪೋಸ್ಟಿಂಗ್ ಮಾಡದೆ ಕಳ್ಳತನಕ್ಕೆ ಪ್ರಾವಿಜನ್ ಮಾಡಿ ಕೊಟ್ಟಿರುವುದು ಏಕೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ.

ಶ್ರೀ ವೀರಕುಮಾರ್ ಪಾಟೀಲ್ :— ಡಿ.ಜಿ.ಪಿ.ಯವರು ಪೋಸ್ಟಿಂಗ್ ಆಗಿ ಎಂಟು ದಿವಸವಾಗಿದೆ ಅವರು ಅಲ್ಲಿ ಹಾಜರಾಗಿರುತ್ತಾರೆ.

ಶ್ರೀ ಡಿ.ವಿ. ಸದಾನಂದ ಗೌಡ :— ಕೋರ್ಟಿನಲ್ಲಿ ಇವರ ಮೇಲೆ ದಾವೆ ಹೂಡಿದ್ದೇವೆಂದು ಹೇಳಿದಿರಿ ಎಷ್ಟು ಪ್ರಕರಣಗಳಲ್ಲಿ ದಾವೆ ಹಾಕಿದ್ದೀರಿ? ಎಷ್ಟು ಜನಕ್ಕೆ ಶಿಕ್ಷೆಯಾಗಿದೆ? ಈ ಎಲ್ಲಾ ಅಂಶಗಳನ್ನು ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ :— ನನ್ನ ಹತ್ತಿರ ಸಧ್ಯಕ್ಕೆ ವಿವರವಿಲ್ಲ ನಂತರ ತಿಳಿಸುತ್ತೇನೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ :— ಸಂಬಂಧಪಟ್ಟ ಪ್ರಶ್ನೆಗೆ ಬೇಕಾದಂಥ ಉತ್ತರಗಳು ಅವರ ಹತ್ತಿರ ಇಲ್ಲದಿದ್ದರೆ ಅವರು ಏಕೆ ಉತ್ತರ ಕೊಡಬೇಕು?

ಅಧ್ಯಕ್ಷರು :— ಮಾನ್ಯ ಮಂತ್ರಿಗಳೇ ಇನ್ನು ಮೇಲೆ ಸರಿಯಾಗಿ ಪ್ರಿಪೇರ್ ಆಗಿ ಬರಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕೆ. :— ಮಾನ್ಯ ಅಧ್ಯಕ್ಷರೆ, ವಿದ್ಯುತ್ ರಾಜ್ಯ ಸಚಿವರಲ್ಲಿ, ನನ್ನ ಒಂದೇ ಒಂದು ವಿನಂತಿ ಏನೆಂದರೆ, ನೀವು ಕಳವು ಆದ ಪ್ರಕರಣಗಳನ್ನು ಹೇಳಿ ಅದರ ಜೊತೆಗೆ ದುರುಪಯೋಗವಾಗುವಂಥದ್ದನ್ನು ಒಪ್ಪಿಕೊಳ್ಳುತ್ತಿದ್ದೀರಿ. ನಿಮ್ಮ ಇಲಾಖೆಯ ವರದಿಯನ್ನು ನೋಡಿದಾಗ ಅಧಿಕೃತವಾಗಿ ಶೇಕಡ 30 ಕಳವು ಆಥವಾ ದುರುಪಯೋಗವಾಗುತ್ತಿದೆ ಎಂದು ಇದೆ. ನೀವು ಇದನ್ನು ಸರಿ ಮಾಡುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳದೆ, ಬೇಡ್ತಿ ಯೋಜನೆ ಮಾಡುತ್ತೇವೆ, ಡ್ಯಾಂ ಕಟ್ಟಿಸುತ್ತೇವೆ, ಎಂದು ಈ ರೀತಿ ಹೇಳುವುದು ಸರ್ಕಾರಕ್ಕೆ ಶೋಭೆ ತರುವಂಥದ್ದಲ್ಲ. ಮೊದಲು ನೀವು ಈ 30 ಪರ್‌ಸೆಂಟನ್ನು ಉಳಿಸಿ. ಈಗೇನು ಕಳುವೂ ಹಾಗೂ ದುರುಪಯೋಗವಾಗುತ್ತಿದೆ ಇದನ್ನು ಕಡಿಮೆ ಮಾಡಿದ ನಂತರ ಉಳಿದ ವಿದ್ಯುತ್ ಉತ್ಪಾದನೆಯ ಬಗ್ಗೆ ಯೋಚಿಸಿ. ನೀವು ಹಾಗೆ ಯೋಚಿಸಿಲ್ಲವೆಂದರೆ, ಕಳವು ಮತ್ತು ದುರುಪಯೋಗವಾಗುವುದನ್ನು ತಡೆಗಟ್ಟುವುದಕ್ಕೆ ಸರ್ಕಾರ ಪ್ರಥಮ ಆದ್ಯತೆ ಕೊಡಬೇಕು; ನಂತರ ವಿದ್ಯುತ್ ಉತ್ಪಾದನೆಯ ಬಗ್ಗೆ ಯೋಚಿಸಬೇಕೆಂದು ನಾನು ಸರ್ಕಾರವನ್ನು ಆಗ್ರಹಪಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ನಿಮ್ಮ ಸಲಹೆ ಅಪೇಕ್ಷಣೀಯ ಮಾತ್ರವಲ್ಲದೇ ಆಕರ್ಷಣೀಯವಾಗಿದೆ. ಆದರೆ ಪ್ರಶ್ನೆ ಏನು ಎಂದರೆ, ಸುಮಾರು 400 ಕಿಲೋ ಮೀಟರ್ ದೂರದಲ್ಲಿ ವಿದ್ಯುತ್ ಉತ್ಪಾದನೆಗೊಂಡು ಅದನ್ನು ಬೆಂಗಳೂರಿಗೆ ತರಬೇಕಾಗುತ್ತದೆ, Transmission and distribition loss is inherent. It is not the question of Karnataka alone, it is a national phenomenon. Therefore, we have set up a cabinet sub-committee headed by the Chief Minister himself of which I am also a member to monitor on weekly basis and contain this. I hope you would give some time for the Government to take decision. ಇಲ್ಲಿ ಏನಾಗದೆ ಎಂದರೆ ಒಂದು ಕಾಲದಲ್ಲಿ ವಿದ್ಯುತ್‌ಶಕ್ತಿಯನ್ನು ತೆಗೆದುಕೊಳ್ಳುವವರೇ ಇರಲಿಲ್ಲ. ಆ ಕಾಲದಲ್ಲಿ ನಾವು ಅಲ್ಯೂಮಿನಿಯಂ ವಿದ್ಯುತ್ ಬೇಸ್ಡ್ ಇಂಡಸ್ಟ್ರೀಸ್ ಅನ್ನು ಬೆಳಗಾವಿಯಲ್ಲಿ ಪ್ರಾರಂಭಿಸಿದೆವು. This has become an infrastructure for not only industries even for agriculture also. ಈಗ ವಿದ್ಯುತ್ ಶಕ್ತಿಯ ಬಳಕೆಯಾಗುತ್ತಿದೆ. ಆದ್ದರಿಂದ, ಲಾಸ್ ಇಲ್ಲವೆಂದು ಯಾವ ಸರ್ಕಾರದವರೂ

12.00 ಪಿ.ಎಂ.

ಹೇಳಿಲ್ಲ, ಮುಂದಕ್ಕೆ ಹೇಳಲೂ ಆಗುವುದಿಲ. ಅದನ್ನು ಕಡಿಮೆ ಮಾಡಲು ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಪ್ರೋಡಕ್ಷನ್, ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಲಾಸಿಗೂ ಸಂಬಂಧ ಕಲ್ಪಿಸುವುದು ಸರಿಯಲ್ಲ.